# ಒಂದು ಮಹಾನ್ ದೃಶ್ಯ


ಮಲಯಾಳ ಮೂಲ : ಇ. ಹರಿಕುಮಾರ್
ಕನ್ನಡ ಅನುವಾದ ಎಂ.ಎಸ್.ಲಕ್ಷ್ಮಣಾಚಾರ್

ಬಸ್‌ಸ್ಟ್ಯಾಂಡ್‌ನ ಎದುರಿದ್ದ ಫುಟ್‌ಪಾತಿನಲ್ಲಿ ಸರ್ಕಸ್ ಮಾಡಿ ತೋರಿಸುತ್ತಿದ್ದ ಹುಡುಗರು ಅಣ್ಣ-ತಂಗಿ ಇರಬೇಕು. ..... ಒಂದು ವಾರದಿಂದ ಆತನು ದಿನವೂ ಆಫೀಸಿಗೆ ಹೋಗುವಾಗಲೂ ಬರುವಾಗಲೂ ನೋಡುತ್ತಿದ್ದನು. ಅವರಿಬ್ಬರ ಮುಖ ಕೊಳೆಯಿಂದ ಕಪ್ಪಾಗಿತ್ತು. ಅವಳು ಆಗಾಗ ತನ್ನ ಅಂಗೈಯಿಂದ ಮೂಗು ಒರೆಸಿಕೊಳ್ಳುತ್ತಿದ್ದಳು. ಐದಾರು ವರ್ಷವಿರಬಹುದು ಅವಳಿಗೆ. ಹರಿದ ಪುಟ್ಟ ಪಾವಡೆ ಹಾಕಿಕೊಂಡಿದ್ದಳು. ಅವನು ಹರಿದಿದ್ದ ನಿಕ್ಕರ್, ಷರ್ಟ್ ಹಾಕಿದ್ದನು.



ಸಾಯಂಕಾಲ ಆರು ಗಂಟೆಯಾಗಿದ್ದರೂ ಅವರಿಬ್ಬರೂ ಸರ್ಕಸ್ ಅಭ್ಯಾಸಗಳನ್ನು ಮುಂದುವರೆಸುತ್ತಲೇ ಇದ್ದರು. ಅವನಿಗೆ ಎಂಟು ವರ್ಷವಿರಬಹುದು. ತನ್ನ ಯೋಗ್ಯತೆಗೆ ತಕ್ಕಂತೆ ಅಭ್ಯಾಸಗಳನ್ನು ಮಾಡಿ ತೋರಿಸುತ್ತಿದ್ದನು. ಪಲ್ಟಿ ಹೊಡೆಯುವುದು, ರಿಂಗ್‌ನಲ್ಲಿ ತನ್ನ ದೇಹವನ್ನು ನುಸುಳಿಸುವುದು ಮುಂತಾದವುಗಳನ್ನು ಮಾಡಿ ತೋರಿಸುತ್ತಿದ್ದನು. ಕೇವಲ ಕೆಲವೇ ಪ್ರೇಕ್ಷಕರಿದ್ದರೂ ಅವನ ಉತ್ಸಾಹ ಕುಗ್ಗುತ್ತಿರಲಿಲ್ಲ. ಪ್ರೇಕ್ಷಕರಲ್ಲಿ ಯಾರೂ ದೊಡ್ಡ ಮೊಬಲಗನ್ನೇನೂ ಕೊಡುತ್ತಿರಲಿಲ್ಲ. ದೊಡ್ಡ ದೊಡ್ಡ ಸರ್ಕಸ್‌ನಲ್ಲಿನ ಅಭ್ಯಾಸಗಳನ್ನು ಕಾಣುವ ನಿರೀಕ್ಷೆಯಿಂದ ಬಂದು ನಿಂತು ಮರಳುವಾಗ ಆ ಒಣ, ಬಡಕಲು ಹುಡುಗಿ ಚಾಚಿದ ತಟ್ಟೆಯನ್ನು ಕಾಣದವರಂತೆ ನಟಿಸಿ ಎಲ್ಲಾ ಹೊರಟು ಹೋಗುತ್ತಿದ್ದರು. ಆದರೆ ಅವರು ತಮ್ಮ ಅಭ್ಯಾಸಗಳನ್ನು ಮುಂದುವರಿಸುತ್ತಲೇ ಇದ್ದರು.

ಆತನು ಆಫೀಸಿನಿಂದ ಅಂದು ಮರಳುತ್ತಿದ್ದಾಗ ಆ ಹುಡುಗನು ಅಭ್ಯಾಸವನ್ನು ನಿಲ್ಲಿಸಿ ಫುಟ್‌ಪಾತ್‌ನ ಒಂದು ಬದಿಯಲ್ಲಿ ಕುಳಿತು ಕಾಲ್ಬೆರಳನ್ನು ನೀವಿಕೊಳ್ಳುತ್ತಿದ್ದನು. ಎಲ್ಲೋ ಸ್ವಲ್ಪ ಗಾಯವಾಗಿ ರಕ್ತ ಬರುತ್ತಿತ್ತು. ಯಾವುದೋ ಅಭ್ಯಾಸ ಮಾಡಿ ತೋರಿಸುತ್ತಿದ್ದಾಗ ಗಾಯ ಆಗಿರಬೇಕು. ಏನಾಯಿತೆಂದು ಕೇಳಿದಾಗಲೂ ಆ ಹುಡುಗ ಉತ್ತರ ಕೊಡಲಿಲ್ಲ. ಅವನಿಗೆ ಯಾರ ಅನುಕಂಪವೂ ಬೇಕಿರಲಿಲ್ಲ. ಅವನ ತಂಗಿ ಬಂದು ತನ್ನ ತಟ್ಟೆ ಚಾಚಿದಾಗ ಹತ್ತು ಪೈಸೆಗೆ ಬದಲು ಆತನು ತನ್ನ ಜೇಬಿನಿಂದ ಹುಡುಕಿ ತೆಗೆದು ಇಪ್ಪತ್ತೈದು ಪೈಸೆ ನೀಡಿದನು.



ಆತನು ತನ್ನ ಫ್ಲಾಟಿನ ಬಳಿ ಬಂದಾಗ ಆತನಿಗೆ ಹೊಳೆಯಿತು. ತಾನು ಅವರಿಗೆ ಎರಡು ರೂಪಾಯಿಯಾದರೂ ಕೊಟ್ಟಿದ್ದರೆ ಅವರಿಗೆ ಒಂದು ಹೊತ್ತಿನ ಊಟ ದೊರಕುತ್ತಿತ್ತು. ಇಪ್ಪತ್ತೈದು ಪೈಸೆಗೆ ಏನಾಗುತ್ತದೆ ಎನ್ನಿಸಿತು. ತನ್ನ ಪರ್ಸ್‌ನಲ್ಲಿ ಧಾರಾಳ ಹಣವಿತ್ತು. ಅದರಿಂದ ಹತ್ತು ರೂಪಾಯಿ ತೆಗೆದು ಅವರಿದ್ದ ಸ್ಥಳಕ್ಕೆ ಧಾವಿಸಿದನು. ಆದರೆ ಅಲ್ಲಿ ಅವರಿರಲಿಲ್ಲ. ಅವನಿಗೆ ಗಾಯವಾಗಿದ್ದರಿಂದ, ಅಭ್ಯಾಸ ನಿಲ್ಲಿಸಿ ಹೊರಟುಹೋದರೆನ್ನಿಸಿತು.

ಆತನು ತಿರುಗಿ ತನ್ನ ಫ್ಲಾಟಿಗೆ ಬಂದನು.

ಮನೆಗೆ ಬಂದೊಡನೆ ಆತನ ಹೆಂಡತಿ ಶಾರದಾ ಹೇಳಿದಳು : ಸೆಕ್ರೆಟರಿ ಫೋನ್ ಮಾಡಿ ನಿಮ್ಮನ್ನು ಬರ ಹೇಳಿದನು '

'ಯಾಕೆ?

ಸಾಯಂಕಾಲದ ಟೆರೇಸ್ ಪಾರ್ಟಿಯ ವಿಷಯವಿರಬೇಕು '

ಸರಿ '

ವಾಸ್ತವದಲ್ಲಿ ಆತನದನ್ನು ಮರೆತಿದ್ದನು.

ಸೌಂಡ್ ಸಿಸ್ಟಂನ ಏರ್ಪಾಡನ್ನು ಆತನಿಗೆ ಸೆಕ್ರೆಟರಿ ವಹಿಸಿದ್ದನು. ಆರ್ಕೆಸ್ಟ್ರಾ ಮುಂಚೆಯೇ ಏರ್ಪಾಡು ಮಾಡಲಾಗಿತ್ತು. ಹಾಡುವವರು ಅದೇ ಕಟ್ಟಡದವರು. ಆತನು ಫೋನ್ ತೆಗೆದುಕೊಂಡು ಬಟನ್‌ಗಳನ್ನೊತ್ತಿದನು.

ಏಳು ಗಂಟೆಗೆ ಸರಿಯಾಗಿ.... ಏಳು ಗಂಟೆಗೆ ' ಆತನು ದೃಢವಾಗಿ ಹೇಳಿದನು. ಸೌಂಡ್ ಸಿಸ್ಟಂ ಇಲ್ಲವೆಂದು ಪಾರ್ಟಿ ಹಾಳು ಮಾಡಬೇಕಿಲ್ಲ '

***

ಟೆರೇಸ್ ಪಾರ್ಟಿ ಬಲು ಜೋರಾಗಿತ್ತು '

NEXT PAGE....

ರಾತ್ರಿ ಒಂದು ಗಂಟೆಯ ವೇಳೆಗೆ ಎಲ್ಲಾ ಮುಗಿದು ಫ್ಲ್ಯಾಟ್‌ಗೆ ಮರಳಿದಾಗ ಶಾರದ ಹೇಳಿದಳು. ಮಗಳು ರಾಗಿಣಿಯ ಅಭಿಪ್ರಾಯವೂ ಅದೇ ಆಗಿತ್ತು. ಐಸ್ ಕ್ರೀಂ ಪ್ರಿಯಳಾದ ರಾಗಿಣಿಗೆ ಅದು ಧಾರಾಳವಾಗಿ ದೊರೆತಿತ್ತು.

ಮತ್ತೆ?

ಚಿಕನ್ ಬಿರಿಯಾನಿ, ಹುರಿದ ಮೀನು ಬಲು ಚೆನ್ನಾಗಿತ್ತು 'ಶಾರದ ಹೇಳಿದಳು. ವೆಜಿಟಬಲ್ ಫ್ರೈಡ್ ರೈಸ್ ಹೇಗಿತ್ತು? ನನಗೆ ಗೋಬಿ ಮಂಚೂರಿ ತಿನ್ನಲು ಹೊಟ್ಟೆಯಲ್ಲಿ ಜಾಗವೇ ಇರಲಿಲ್ಲ. ಪಿಸ್ತ ಐಸ್‌ಕ್ರೀಂ ಚೆನ್ನಾಗಿ ತಿಂದು / ಬಿಟ್ಟೆ'

ಒಟ್ಟಿನಲ್ಲಿ ಎಲ್ಲವೂ ಚೆನ್ನಾಗಿತ್ತು 'ಆತನು ಒಪ್ಪಿಕೊಂಡನು.

ಬಫೆ ಡಿನ್ನರ್ ಆಗಿದ್ದರಿಂದ ಯಾರಿಗೂ ಯಾವ ತೊಂದರೆಯೂ ಇಲ್ಲದಂತೆ ತಮಗೆ ತೋಚಿದ್ದನ್ನು ತಿನ್ನಬಹುದಿತ್ತು. ಬಿಳಿ ಬಟ್ಟೆಯನ್ನು ಹಾಸಿ ಉದ್ದಕ್ಕೆ ಹಾಕಿದ್ದ ಮೇಜುಗಳ ಮೇಲೆ ಸಣ್ಣಗೆ ಉರಿಯುತ್ತಿದ್ದ ಗ್ಯಾಸ್ ಒಲೆಯ ಮೇಲೆ ವೃತ್ತಾಕೃತಿಯಲ್ಲಿ ಉದ್ದದ ಸ್ಟೀಲ್ ಪಾತ್ರೆಗಳಲ್ಲಿ ಬಿಸಿ ಬಿಸಿ ತಿನಿಸುಗಳನ್ನು ತುಂಬಿದ್ದರು.

ಆರ್ಕೆಸ್ಟ್ರಾ ಚೆನ್ನಾಗಿತ್ತು'

ಆರು ಸಾವಿರ ಕೊಟ್ಟು ಒಳ್ಳೆಯ ಆರ್ಕೆಸ್ಟ್ರಾ ಏರ್ಪಾಡಿಸದಿದ್ದರೆ ಜಗಳವಾಗುವುದಿಲ್ಲವೇ?

ಆರು ಸಾವಿರ ಕೊಡುವಷ್ಟೇನೂ ಚೆನ್ನಾಗಿರಲಿಲ್ಲ'

ಹಾಡಿದ್ದೂ ಅಷ್ಟರ ಮಟ್ಟಿಗೇ ಇತ್ತು.'

ಮತ್ತೆ ನನಗೆ ಆ ರೋಹಿಣಿಯ ಡ್ಯಾನ್ಸ್ ಸ್ವಲ್ಪವೂ ಹಿಡಿಸಲಿಲ್ಲ. ಪ್ರಭುದೇವ್‌ನ ಜೊತೆಯಲ್ಲಿ ಆಡಿದ ಆ ಡ್ಯಾನ್ಸ್ ಟಿ.ವಿ.ಯಲ್ಲಿ ಬಂದರೆ ನಾನು ಅದನ್ನೇ ಆರಿಸಿ ಬಿಡುತ್ತೇನೆ. ನನ್ನ ಮಗಳು ಅದನ್ನು ನೋಡದಿರುವುದೇ ಮೇಲು. ಟೀನ್‌ವಿಜ್‌ನ ಹುಡುಗಿಯರು ಸ್ಟೇಜ್ ಮೇಲೆ ಹೋಗಿ ಆಡುವಂಥ ಡ್ಯಾನ್ಸಲ್ಲ ಅದು.'

***



ಆತನು ನಕ್ಕು ಬಿಟ್ಟನು.

ಯಾಕ್ರೀ ನಗುತ್ತೀರಿ?

ನಿನಗೆ ಗೊತ್ತೇ? ರೋಹಿಣಿಯ ತಾಯಿ ಒಂದು ವಾರದಿಂದ ಮಗಳಿಗೆ ಆ ಡ್ಯಾನ್ಸ್ ಪ್ರ್ಯಾಕ್ಟೀಸ್ ಮಾಡಿಸುತ್ತಿದ್ದರು. ಅವಳ ಆ ಡ್ಯಾನ್ಸ್ ಅನ್ನು ವೀಡಿಯೋ ತೆಗೆಸಿದರಲ್ಲಾ ನೋಡಲಿಲ್ಲವೇನು? ತಮ್ಮ ಬಂಧು, ಬಳಗ, ಮಿತ್ರವರ್ಗದವರಿಗೆ ತೋರಿಸಲಿರಬೇಕು.'

ಈ ದರಿದ್ರ ಡ್ಯಾನ್ಸ್ ಅನ್ನು ತೋರಿಸುತ್ತಾರೆಯೇ?

ಅದೇ, ಈ ಡ್ಯಾನ್ಸ್ ಅವರನ್ನು ಸೊಸೈಟಿಯಲ್ಲಿ ಹೈ ಲೆವೆಲ್‌ಗೆ ಒಯ್ಯುತ್ತದೆ. ನೀನೂ ಬೇಕಾದರೆ ನಿನ್ನ ಮಗಳು ಈ ಏಜ್‌ಗೆ ಬಂದಾಗ ಅವಳಿಗೆ ಸಿಲ್ಕ್ ಸ್ಮಿತಳ ಅಥವಾ ನಗ್ಮಾಳ ಡ್ಯಾನ್ಸ್ ಕಲಿಸಿಬಿಡು'

***

ಆತನು ನಿದ್ರಿಸುವ ಮುಂಚೆ ಶಾರದಳಿಗೆಂದನು.

ಅಡಿಗೆ ಮನೆಯ ರಹಸ್ಯವೇನಾದರೂ ನಿನಗೆ ಗೊತ್ತೇ?

ಇಲ್ಲವಲ್ಲಾ!

ನಾನು ನೂರೈವತ್ತು ಚಿಕನ್ ಬಿರಿಯಾನಿಗೆ ಆರ್ಡರ್ ಕೊಟ್ಟಿದ್ದೆ. ಬಂದರು ತೊಂಬತ್ತೇ ಜನ. ಅದರಲ್ಲಿ ಶಾಕಾಹಾರಿಗಳು ಕೆಲವರಿದ್ದರು. ಹೊರಗಿನ ಕೆಲವರು ಬರಬಹುದೆಂದುಕೊಂಡಿದ್ದೆವು. ಆದರೆ ಬಹಳ ಜನ ಬರಲೇ ಇಲ್ಲ. ಎಪ್ಪತ್ತು ಪ್ಲೇಟ್ ಬಿರಿಯಾನಿ ಉಳಿದು ಹೋಯಿತು.'



ಆಗೇನು ಮಾಡಿದಿರಿ?

ಅದನ್ನು ಹಾಗೇ ಪ್ಲಾಸ್ಟಿಕ್ ಚೀಲಗಳಲ್ಲಿ ಹಾಕಿ ತಿಪ್ಪೆಗೆ ಬಿಸಾಡಲಾಯಿತು. ಪರ್‌ಫೆಕ್ಟ್ ಮರ್ಡರ್'

ಏನೆಂದಿರಿ ತಿಪ್ಪೆಯಲ್ಲೇ?

ಇನ್ನೇನು ಮಾಡುವುದು ಮತ್ತೆ? ಮಾಡಿದ್ದು ನಾಲ್ಕು ಗಂಟೆಗಲ್ಲವೇ? ರಾತ್ರಿ ಒಂದು ಗಂಟೆಯಾಗುವ ವೇಳೆಗೆ ಕೆಟ್ಟು ಹೋಗುವುದಿಲ್ಲವೇ? ಒಂದು ಪ್ಲೇಟ್ ಬಿರಿಯಾನಿಗೆ ಇಪ್ಪತ್ತೈದು ರೂಪಾಯಿಯಂತೆ ಎಷ್ಟು ಹಣ ಹಾಳಾಯಿತು? ಹುರಿದ ಮೀನು, ವೆಜಿಟಬಲ್ ಫ್ರೈಡ್ ರೈಸ್ ಎಲ್ಲಾ ಮಿಕ್ಕು ಹೋಯಿತು'

ಆತನು ಸ್ವಲ್ಪ ಮಾತು ನಿಲ್ಲಿಸಿ ಅನಂತರ ಸ್ವಗತವೆಂಬಂತೆ ಹೇಳಿದನು. ಅದೂ ದಾರಿದ್ರ್ಯ, ಉಪವಾಸ ತಾಂಡವವಾಡುತ್ತಿರುವ ಈ ದೇಶದಲ್ಲಿ ಹೀಗೆ...'



ಶಾರದ ನಿದ್ರಾಲೋಕದಲ್ಲಿ ಮುಳುಗಿದ್ದಳು. ಆದರೆ ಆತನಿಗೆ ಬಹಳ ಹೊತ್ತು ನಿದ್ದೆ ಬರಲಿಲ್ಲ. ಕಾಲಿಗೆ ಗಾಯವಾಗಿ ರಕ್ತ ಬರುತ್ತಿದ್ದರೆ, ಅದರ ಮೇಲೆ ಕೈ ಅದುಮಿ ನೋವನ್ನು ಸಹಿಸುತ್ತಿದ್ದ ಆ ಎಂಟು ವರ್ಷದ ಹುಡುಗನ ಮುಖ ಆತನ ಕಣ್ಣ ಮುಂದೆಯೇ ಇತ್ತು.

***

ಬೆಳಿಗ್ಗೆ ಸೊಸೈಟಿಗೆ ಹೋಗಿ ಲೆಕ್ಕ ನೋಡಿದಾಗ ಆ ರಾತ್ರಿಯ ಸಂತೋಷ ಕೂಟದ ಖರ್ಚು ಇಪ್ಪತ್ತೈದು ಸಾವಿರ ರೂಪಾಯಿ, ಆತನು ಅಂದು ಸರ್ಕಸ್ ಹುಡುಗನಿಗೆ ಕೊಟ್ಟ ಹಣ ಇಪ್ಪತ್ತೈದು ಪೈಸೆ.

ಅಂದು ಬಸ್ ಸ್ಟ್ಯಾಂಡ್‌ನಲ್ಲಿ ಅವರಿಬ್ಬರೂ ಕಾಣಿಸಲಿಲ್ಲ. ಅವರು ಬೇರೆ ಹೊಸ ಸ್ಥಳವನ್ನು ಹುಡುಕುತ್ತಾ ಹೋಗಿರಬೇಕು. ದೊಡ್ಡ ದೊಡ್ಡ ಸರ್ಕಸ್‌ಗಳೇ ಒಂದು ವಾರಕ್ಕಿಂತ ಹೆಚ್ಚು ನಿಂತರೆ ಕಲೆಕ್ಷನ್ ಕಡಿಮೆಯಾಗುತ್ತಾ ಬರುತ್ತದೆ. ಇನ್ನು ಇವರ ಸ್ಥಿತಿ?

ಸಾಯಂಕಾಲ ವಾಕಿಂಗ್ ಹೋಗುವಾಗ ಆತನು ಅವನು ಒಂದು ಅಂಗಡಿಯ ಬಳಿ ಕುಳಿತಿರುವಾಗ ನೋಡಿದನು. ಅದೇ ವೇಷ. ಕೊಳಕು ಮುಖ, ಪಕ್ಕದಲ್ಲಿ ಕೊಳೆ ಬಟ್ಟೆಯ ಮೂಟೆ. ಆ ಹುಡುಗನು ತನ್ನ ಮುಂದಿದ್ದ ಪೊಟ್ಟಣವನ್ನು ಬಿಚ್ಚುವುದನ್ನು ನೋಡುತ್ತಾ ಅವನ ತಂಗಿ ಅವನ ಮುಂದೆ ಕಾತರದಿಂದ ಕಾಯುತ್ತಿದ್ದಳು. ಬಿಚ್ಚಿದ ಆ ಪೊಟ್ಟಣದಲ್ಲಿ ನಾಲ್ಕೈದು ಇಡ್ಲಿಗಳಿದ್ದವು.

ಆತನು ಇವರ ಬಳಿ ಹೋದಾಗ ಅವನು ಆತನನ್ನು ಕತ್ತೆತ್ತಿ ಜಿಗುಪ್ಸಾ ಭಾವದಿಂದ ನೋಡಿದನು. ಆತನು ಕೇಳಿದನು.

ನಿಮಗೆ ತಂದೆತಾಯಿಯರಿಲ್ಲವೇ?

ತಾಯಿ ಇಲ್ಲ. ಸತ್ತು ಹೋದರು'

ತಂದೆ?



ಇದ್ದಾರೆ'

ಎಲ್ಲಿ?

ಜೈಲಿನಲ್ಲಿ'

ಜೈಲಿಗೇಕೆ ಹೋದರು?

ಕಳ್ಳತನ ಮಾಡಿದ್ದರಿಂದ'

ತಂಗಿ ಇಡ್ಲಿ ತಿನ್ನಲು ಆರಂಭಿಸಿದ್ದಳು. ಅವನೂ ಇಡ್ಲಿಯ ಮೇಲೆ ಕೈ ಇಟ್ಟನು. ಅಪರಿಚಿತರು ಹೋದರೆ ಸಾಕೆಂಬ ಭಾವನೆ ಅವನ ಮುಖದಲ್ಲಿತ್ತು.

ನಾನು ಹತ್ತು ರೂಪಾಯಿ ಕೊಟ್ಟರೆ ನೀವು ಅದರಿಂದ ಏನು ಮಾಡುತ್ತೀರಿ? ಆತನು ಕೇಳಿದನು.

ಅವನ ಮುಖ ಅರಳಿತು. ಅವನು ನಾಚಿಕೊಳ್ಳುತ್ತಾ, ನಾವು ಸಿನಿಮಾಗೆ ಹೋಗುತ್ತೇವೆ' ಎಂದನು.

ಆತನು ಹತ್ತು ರೂಪಾಯಿಯ ನೋಟೊಂದನ್ನು ಅವನ ಕೈಯಲ್ಲಿಟ್ಟನು. ಅವನು ನಂಬಲು ಅಶಕ್ಯವೆಂಬಂತೆ ತಂಗಿಯನ್ನು ನೋಡಿದನು. ಅವಳು ತಿನ್ನುವುದನ್ನು ನಿಲ್ಲಿಸಿ ನೋಟು ತೆಗೆದುಕೊಂಡು ನೋಡಿದಳು. ಅವಳ ಮುಖ ಅರಳಿತು.



ಆತನು ಕೇಳಿದನು

ನಿಮ್ಮ ಹೆಸರೇನು?

ನಾನು ರಾಜ, ಇವಳು ನನ್ನ ತಂಗಿ ಶೀಲ 'ಅವನೆಂದನು.

ಸರಿ ರಾಜ ನಾನು ಹೋಗುತ್ತೇನೆ.'

ಆತನು ಹೋಗಲೆಂದು ತಿರುಗಿದಾಗ ರಾಜು ತಂಗಿಗೆ ಏನೋ ಹೇಳಿದನು. ಅವಳು ಮೂಟೆ ಬಿಚ್ಚಿದಳು. ಅವನು ಆತುರಾತುರವಾಗಿ ಅದರಲ್ಲಿದ್ದ ಎರಡು ಕಬ್ಬಿಣದ ರಿಂಗುಗಳನ್ನು ಹೊರ ತೆಗೆದು ಯಾವುದೇ ಸರ್ಕಸ್ ಅಭ್ಯಾಸ ಮಾಡುವಂತೆ ನಾಲ್ಕು ಅಡಿ ಹಿಂದಕ್ಕೆ ಹೋಗಿ ಕೈ ತಟ್ಟಿ ನಾಲ್ಕೈದು ಬಾರಿ ಹಿಂದಕ್ಕೂ ಮುಂದಕ್ಕೂ ಪಲ್ಟಿ ಹೊಡೆದನು. ಕಬ್ಬಿಣದ ಬಳೆಯ ಮೂಲಕ ತನ್ನ ಪುಟ್ಟ ದೇಹವನ್ನು ಪ್ರಯಾಸದಿಂದ ತೂರಿಸಿದನು. ಅನಂತರ ಅವನ ತಂಗಿಯೂ ಅವನೊಂದಿಗೆ ಆ ರಿಂಗ್ ಮೂಲಕ ಬಲವಾಗಿ ತೂರಿದಳು. ಅವನು ತನ್ನ ತಂಗಿಯನ್ನು ತನ್ನ ಹೆಗಲ ಮೇಲೆ ನಿಲ್ಲಿಸಿಕೊಡು ಹಿಂದಕ್ಕೂ ಮುಂದಕ್ಕೂ ನಡೆದನು. ತನ್ನ ಹಣೆಯ ಮೇಲೆ ಒಂದು ಉದ್ದನೆಯ ಕೋಲನ್ನು ನಿಲ್ಲಿಸಿಕೊಂಡು ಅದರ ಕೊನೆಯಲ್ಲಿ ಒಂದು ಟೀ ಕಪ್ಪನ್ನು ಇಟ್ಟು ಬ್ಯಾಲೆನ್ಸ್ ಮಾಡುತ್ತಾ ಅವನು ನಡೆದನು. ತಿನ್ನುವುದನ್ನು ಬಿಟ್ಟು ಅವನು ಆತನಿಗಾಗಿ, ಕೇವಲ ಆತನಿಗಾಗಿ ಸರ್ಕಸ್ ಅಭ್ಯಾಸಗಳನ್ನು ತೋರಿಸುತ್ತಿದ್ದನು.

ಅರಳಿದ ಕಣ್ಣುಗಳೊಂದಿಗೆ ಆಶ್ಚರ್ಯವನ್ನೂ ಹೊರಸೂಸುವ ಮುಖದೊಂದಿಗೆ ಆತನು ಇದುವರೆಗೂ ಎಲ್ಲೂ ನೋಡದಿದ್ದ ಬಹು ಮಹತ್ವಾದ ದೃಶ್ಯವನ್ನು ನೋಡುತ್ತಾ ನಿಂತಿದ್ದನು.



BACK TO MAIN PAGE